ಉ) ಕಾರಂಜಾ ಯೋಜನೆಗೆ ಪ್ರತಿವರ್ಷ 50 ಕೋಟಿ ರೂಪಾಯಿಗಳನ್ನು ಒದಗಿಸಲಾಗುವುದೆಂದು ಸರ್ಕಾರ ಘೋಷಿಸಿದೆಯೇ;

ಊ) ಹಾಗಿದ್ದಲ್ಲಿ, 1994-95ರಲ್ಲಿ ಆ ಹಣವನ್ನು ಬಿಡುಗಡೆ ಮಾಡಲಾಗಿದೆಯೇ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು) :

ಅ) ಕಾರಂಜಾ ಯೋಜನೆಯನ್ನು 1970ರಲ್ಲಿ ಮತ್ತು ಚುಳಕಿನಾಲಾ ಮತ್ತು ಮೇಲ್ದಂಡೆ ಮುಲ್ಲಾಮಾರಿ ಯೋಜನೆಗಳನ್ನು 1978-79ರಲ್ಲಿ ಪ್ರಾರಂಭಿಸಲಾಯಿತು.

ಆ) 1) ಕಾರಂಜಾ ಯೋಜನೆ 10,347 ಲಕ್ಷಗಳು

2) ಚುಳಕಿನಾಲಾ ಯೋಜನೆ 1,289 ಲಕ್ಷಗಳು

3) ಮೇಲ್ದಂಡೆ ಮುಲ್ಲಾಮಾರಿ ಯೋಜನೆ 1,819 ಲಕ್ಷಗಳು

ಇ) ಈಗಾಗಲೇ ಪೂರ್ಣಗೊಳಿಸಬೇಕಾಗಿತ್ತು.

ಈ) 1993-94ರಲ್ಲಿ ಫೆಬ್ರುವರಿ 1994ರ ವರೆಗೆ ಮಾಡಲಾದ ಖರ್ಚು.

ಕಾರಂಜಾ ಯೋಜನೆ(1,054 ಲಕ್ಷ ರೂ.)

ಚುಳಕಿನಾಲಾ ಯೋಜನೆ(245 ಲಕ್ಷ ರೂ.)

ಮೇಲ್ದಂಡೆ ಮುಲ್ಲಾಮಾರಿ ಯೋಜನೆ(103 ಲಕ್ಷ ರೂ.)

ಉ) ಹೌದು.

ಊ) ಪರಿಶೀಲಿಸಲಾಗುತ್ತಿದೆ.

ಸವಣೂರ ಪಟ್ಟಣದಲ್ಲಿ 110 ಕೆ.ವಿ. ಸ್ಟೇಷನ್ ಸ್ಥಾಪಿಸುವ ವಿಚಾರ ಕುರಿತು

768 - ಶ್ರೀ ಮಂಜುನಾಥ್ ಸಿ. ಕುನ್ನೂರ್ (ಶಿಗ್ಗಾಂವ್) : ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸವಣೂರ ಪಟ್ಟಣದಲ್ಲಿ ಕರ್ನಾಟಕ ವಿದ್ಯುತ್ ಮಂಡಳಿ (ಕೆಇಬಿ) ಇಲಾಖೆಯಿಂದ 110 ಕೆ.ವಿ. ಸ್ಟೇಷನ್ 1993-94ರ ಆಯವ್ಯಯದಲ್ಲಿ ಮಂಜೂರಾಗಿದೆಯೇ?

ಆ) ಹಾಗಿದ್ದಲ್ಲಿ ಅದನ್ನು ಎಷ್ಟು ದಿವಸಗಳಲ್ಲಿ ಪ್ರಾರಂಭ ಮಾಡಲಾಗುವುದು?

ಇ) ಧಾರವಾಡ ಜಿಲ್ಲೆಯಲ್ಲಿ ಬೇರೆ ಕಡೆಗೆ 100 ಕೆ.ವಿ. ಸ್ಟೇಷನ್ ಕರ್ನಾಟಕ ವಿದ್ಯುತ್ ಮಂಡಳಿ (ಕೆಇಬಿ) ಇಲಾಖೆಯಿಂದ ಪ್ರಾರಂಭ ಮಾಡಲಾಗಿದೆಯೇ?

ಶ್ರೀ ಎಸ್.ಎಂ ಕೃಷ್ಣ (ಉಪ ಮುಖ್ಯಮಂತ್ರಿಗಳು) :

ಅ) ಇಲ್ಲ.

ಆ) ಇದು ಉದ್ಭವಿಸುವುದಿಲ್ಲ.

ಇ) ಧಾರವಾಡ ಜಿಲ್ಲೆಯ ಗೋಪನ ಕೊಪ್ಪದಲ್ಲಿ (ಹುಬ್ಬಳ್ಳಿ ಸಮೀಪ) 110 ಕೆ.ವಿ. ವಿದ್ಯುತ್ ಸಬ್ಸ್ಟೇಷನ್ನಿನ ನಿರ್ಮಾಣ ಕಾರ್ಯವನ್ನು ಪ್ರಾರಂಭ ಮಾಡಲಾಗಿದೆ.

ರಾಜ್ಯದಲ್ಲಿ ಎ.ಪಿ.ಪಿ ಹುದ್ದೆ ಆಯ್ಕೆ ಮಾಡಿಕೊಂಡಿದ್ದರ ಕುರಿತು

767 - ಶ್ರೀ ಮಂಜುನಾಥ್ ಸಿ. ಕುನ್ನೂರ್ (ಶಿಗ್ಗಾಂವ್) : ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದಲ್ಲಿ 1993-94ನೇ ಸಾಲಿನಲ್ಲಿ ಎಷ್ಟು ಅಸಿಸ್ಟೆಂಟ್ ಪಬ್ಲಿಕ್ ಪ್ರಾಸಿಕ್ಯೂಟರ್ ಹುದ್ದೆಗಳನ್ನು ಆಯ್ಕೆ ಮಾಡಿಕೊಳ್ಳಲಾಯಿತು;

ಆ) ಸದರೀ ಹುದ್ದೆಗಳನ್ನು ಆಯ್ಕೆ ಮಾಡಿಕೊಳ್ಳುವಾಗ ಎಷ್ಟು ಜನ ಅಭ್ಯರ್ಥಿಗಳು ಪರೀಕ್ಷೆಗೆ ಕುಳಿತು ಕೊಂಡಿರುವರು;

ಇ) ಎಷ್ಟು ಜನ ಅಭ್ಯರ್ಥಿಗಳಿಗೆ ಸಂದರ್ಶನಕ್ಕೆ ಕರೆಯಲಾಯಿತು.

ಈ) ಸಂದರ್ಶನಕ್ಕೆ ಬಂದ ಅಭ್ಯರ್ಥಿಗಳ ಹಾಗೂ ಆಯ್ಕೆಕೊಂಡ ಅಭ್ಯರ್ಥಿಗಳು ಎಷ್ಟು ಅಂಕಗಳನ್ನು ಲಿಖಿತ ಪರೀಕ್ಷೆಯಲ್ಲಿ ಹಾಗೂ ಮೌಖಿಕ ಪರೀಕ್ಷೆಯಲ್ಲಿ ಪಡೆದು ಕೊಂಡಿದ್ದಾರೆ (ಸಂಪೂರ್ಣ ವಿವರ ನೀಡುವುದು);

ಉ) ಆಯ್ಕೆಕೊಂಡ ಅಭ್ಯರ್ಥಿಗಳನ್ನು ಯಾವ ನಿಯಮದ ಪ್ರಕಾರ ಆಯ್ಕೆ ಮಾಡಿಕೊಳ್ಳಲಾಯಿತು ಹಾಗೂ ಅನುಸರಿಸಿದ ಕ್ರಮಗಳೇನು?

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

ಅ) ಕರ್ನಾಟಕ ರಾಜ್ಯದಲ್ಲಿ 1993-94ನೇ ಸಾಲಿನಲ್ಲಿ 96 ಜನ ಅಭ್ಯರ್ಥಿಗಳನ್ನು ಅಸಿಸ್ಟೆಂಟ್ ಪಬ್ಲಿಕ್ ಪ್ರಾಸಿಕ್ಯೂಟರ್ ಹುದ್ದೆಗೆ ಆಯ್ಕೆ ಮಾಡಿಕೊಳ್ಳಲಾಗಿದೆ.

ಆ) 1202 ಅಭ್ಯರ್ಥಿಗಳು

ಇ) 290 ಅಭ್ಯರ್ಥಿಗಳು ಲಿಖಿತ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದು, ಸಂದರ್ಶನಕ್ಕೆ ಕರೆಯಲು ಅರ್ಹರಾಗಿದ್ದರು. ಅವರುಗಳ ಪೈಕಿ 282 ಅಭ್ಯರ್ಥಿಗಳು ಸಂದರ್ಶನಕ್ಕೆ ಹಾಜರಾಗಿದ್ದರು.

ಈ) ಲಿಖಿತ ಪರೀಕ್ಷೆಯಲ್ಲಿ ಕನಿಷ್ಠ ಅಂಕಗಳನ್ನು ಪಡೆದ ಅಭ್ಯರ್ಥಿಗಳನ್ನು ಸಂದರ್ಶನಕ್ಕೆ ಕರೆಯಲಾಗುವುದು. ಸಂದರ್ಶನದಲ್ಲಿ ಆಯಾಯ ದಿವಸವೇ ಆಯ್ಕೆ ಸಮಿತಿಯ ಅಧ್ಯಕ್ಷರ ಕಛೇರಿಯ ಸೂಚನಾಫಲಕದಲ್ಲಿ ಪ್ರಕಟಿಸಲಾಗಿದೆ.

ಉ) ಆಯ್ಕೆಗೊಂಡ ಅಭ್ಯರ್ಥಿಗಳನ್ನು ಕರ್ನಾಟಕ ಸರ್ಕಾರಿ ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ನಿರ್ದೇಶನಾಲಯ (ವೃಂದ ಮತ್ತು ನೇಮಾ) ತಿದ್ದುಪಡಿಗಳನ್ವಯ ಹಾಗೂ ಕರ್ನಾಟಕ ಸರ್ಕಾರಿ (ಸಾಮಾನ್ಯ ನೇಮಕಾತಿ) ನಿಯಮಗಳ, 1977ರ ಪ್ರಕಾರ ಆಯ್ಕೆ ಮಾಡಲಾಗಿದೆ.

ಸವಣೂರ ತಾಲ್ಲೂಕು ಕಳಸೂರ ಹಾಗೂ ಕುಣಿಮೆಳ್ಳಿಹಳ್ಳಿ ಬ್ಯಾರೇಜ್ ಕೆಲಸದ ಪ್ರಗತಿ ಕುರಿತು

766 - ಶ್ರೀ ಮಂಜುನಾಥ್ ಸಿ. ಕುನ್ನೂರ್ (ಶಿಗ್ಗಾಂವ್) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದಲ್ಲಿ ವಿವಿಧ ನದಿಗಳಿಗೆ ಎಷ್ಟು ಬ್ಯಾರೇಜ್ಗಳನ್ನು 1993-94ರಲ್ಲಿ ಶಂಕು ಸ್ಥಾಪನೆ ಮಾಡಲಾಗಿದೆ ಹಾಗೂ ಅವುಗಳಲ್ಲಿ ಎಷ್ಟನ್ನು ಕೈಗೆತ್ತಿಕೊಳ್ಳಲಾಗಿದೆ (ವಿವರ ನೀಡುವುದು);

ಆ) ಶಿಗ್ಗಾಂವ ವಿಧಾನ ಸಭಾ ಕ್ಷೇತ್ರ ಸವಣೂರ ತಾಲ್ಲೂಕು ಕಳಸೂರ ಹಾಗೂ ಕುಣಿಮೆಳ್ಳಿ ಹಳ್ಳಿ ಬ್ಯಾರೇಜ್ ಕೆಲಸ ಯಾವ ಹಂತದಲ್ಲಿದೆ;

ಇ) ಸದರೀ ಕಾಮಗಾರಿಗಳನ್ನು ಎಷ್ಟು ದಿನಗಳಲ್ಲಿ ಮುಗಿಸಲಾಗುವುದು?

ಡಾ॥ ಆರ್.ಬಿ. ಚೌಧರಿ (ಸಣ್ಣ ನೀರಾವರಿ ರಾಜ್ಯ ಸಚಿವರು) :

ಅ) ಈ ಕೆಳಗೆ ತೋರಿಸಿದ ನದಿಗಳಿಗೆ ಬ್ಯಾರೇಜ್ಗಳನ್ನು 1993-94ರಲ್ಲಿ ಶಂಕುಸ್ಥಾಪನೆ ಮಾಡಲಾಗಿದೆ.

1) ಘಟಪ್ರಭಾ ನದಿಗೆ ಅವರಾದಿ ಹತ್ತಿರ ತಾ: ಗೋಕಾಕ ಜಿಲ್ಲೆ ಬೆಳಗಾಂ.

2) ವೇದಗಂಗಾ ನದಿಗೆ ಹುನ್ನರಗಿ ಹತ್ತಿರ ತಾ: ಚಿಕ್ಕೋಡಿ, ಜಿಲ್ಲೆ ಬೆಳಗಾಂ.